# ಭೈರವಿ ಕೆಂಪೇಗೌಡ ಮತ್ತು ಸ್ವಾಮಿ ವಿವೇಕಾನಂದರು

❑ ಪ್ರೊ. ಎನ್. ಕೃಷ್ಣಸ್ವಾಮಿ

**ತ್ಯಾಗರಾಜರ ಶಿಷ್ಯಪರಂಪರೆಯಲ್ಲಿನ ಶ್ರೇಷ್ಠ ವಾಗ್ಗೇಯಕಾರರಾದ ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಅವರ ಅದ್ವಿತೀಯ ಶಿಷ್ಯರೆನಿಸಿಕೊಂಡವರು ಭೈರವಿ ಕೆಂಪೇಗೌಡರು. ಇವರ ಹಾಡುಗಾರಿಕೆಗೆ ಮಾರುಹೋಗಿದ್ದ ಸ್ವಾಮಿ ವಿವೇಕಾನಂದರ ಕೃಪಾಶೀರ್ವಾದಗಳನ್ನು ಪಡೆದ ಪ್ರಸಂಗವನ್ನು ಮನೋಜ್ಞವಾಗಿ ತಿಳಿಸಿರುವ ಪ್ರೊ. ಎನ್. ಕೃಷ್ಣಸ್ವಾಮಿಯವರು ಬೆಂಗಳೂರಿನಲ್ಲಿರುವ ಸ್ವಾಮಿ ವಿವೇಕಾನಂದ ಎಜುಕೇಷನ್ ಸೊಸೈಟಿಯ ಕಾರ್ಯದರ್ಶಿಗಳೂ ಬೆಂಗಳೂರು ರಾಮಕೃಷ್ಣ ಮಠದ ನಿಕಟ ಭಕ್ತರೂ ಆಗಿರುವರು.**

ಶ್ರೀರಾಮಕೃಷ್ಣರು ಈ ಜಗತ್ತಿನಿಂದ ೧೮೮೬ರಲ್ಲಿ ನಿರ್ಗಮಿಸಿದಾಗ, ಸ್ವಾಮಿ ವಿವೇಕಾನಂದರು ಪರಮಹಂಸರ ವಿರಾಗೀ ಶಿಷ್ಯರನ್ನು ಸೇರಿಸಿ, ಒಂದು ಮಠ ಸ್ಥಾಪಿಸಿ, ತಮ್ಮ ಸಾಧನೆಯನ್ನು ಮುಂದುವರಿಸಿದರು. ಮಠ ಒಂದು ನೆಲೆಗೆ ಬಂದಮೇಲೆ ಸ್ವಾಮೀಜಿ ಒಬ್ಬ ಪರಿವ್ರಾಜಕರಾಗಿ ಭಾರತದ ಉದ್ದಗಲಕ್ಕೂ ಸಂಚರಿಸಿ ನಮ್ಮ ದೇಶದ ನಿಕಟ ಪರಿಚಯ ಪಡೆದುಕೊಂಡರು. ಆ ಮೂರು ವರ್ಷಗಳಲ್ಲಿ ಅವರು ಅನೇಕ ಶಿಷ್ಯರನ್ನು ಸಂಪಾದಿಸಿಕೊಂಡರು. ನೂರಾರು ಇತರ ಜನರನ್ನು ತಮ್ಮ ಪ್ರಭಾವಲಯಕ್ಕೆ ಸೇರಿಸಿಕೊಂಡರು. ಹೀಗೆ ಪ್ರಭಾವಿತರಾದವರಲ್ಲಿ ರಾಜಮಹಾರಾಜರಿದ್ದರು, ದೇಶಭಕ್ತರು ಇದ್ದರು, ಸಾಧಾರಣ ಪ್ರಜೆಗಳೂ ಇದ್ದರು. ಇವರ ಪೈಕಿ ಮೈಸೂರಿನಲ್ಲಿ ಒಬ್ಬ ಮಹಾನ್ ಸಂಗೀತಗಾರರಾಗಿದ್ದ ಭೈರವಿ ಕೆಂಪೇಗೌಡ ಎಂಬುವರೂ ಒಬ್ಬರು. ಮೈಸೂರು ಮಹಾರಾಜರ ಆಸ್ಥಾನದಲ್ಲಿ ಕೆಂಪೇಗೌಡರ ಅದ್ಭುತವಾದ ಗಾಯನ ಕೇಳಿ ಸ್ವಯಂ ಉತ್ತಮ ಸಂಗೀತಗಾರರಾಗಿದ್ದ ಸ್ವಾಮೀಜಿ ಮುದಗೊಂಡರು. ಕೆಂಪೇಗೌಡರ ಮೇಲೆ ಸ್ವಾಮೀಜಿ ಎಂತಹ ಪರಿಣಾಮ ಬೀರಿದರೆಂಬುದನ್ನು ವಿವರಿಸುವುದೇ ಈ ಲೇಖನದ ಉದ್ದೇಶ.

## ಭೈರವಿ ಕೆಂಪೇಗೌಡರು

ಭೈರವಿ ಕೆಂಪೇಗೌಡರ ಸಂಗೀತ ಮೆಚ್ಚಿದವರು ಅನೇಕರು ನಮ್ಮ ಕಾಲದಲ್ಲಿಯೂ ಇದ್ದರು—ಈಗಲೂ ಇದ್ದಾರು. ಬಹು ಕಠಿಣ ವಿಮರ್ಶಕರಾಗಿದ್ದ ವಿದ್ವಾನ್ ಸುಬ್ಬರಾಮಯ್ಯನವರೇ ಕೆಂಪೇಗೌಡರ ಸಂಗೀತವನ್ನು ಮುಕ್ತ ಕಂಠದಿಂದ ಹೊಗಳುತ್ತಿದ್ದರು. ಡಿ.ವಿ.ಜಿ.ಯವರೂ ಮೈಸೂರು ವಾಸುದೇವಾಚಾರ್ಯರೂ ತಮ್ಮ ನೆನಪುಗಳ ಪುಸ್ತಕದಲ್ಲಿ ಕೆಂಪೇಗೌಡರ ವ್ಯಕ್ತಿಚಿತ್ರವನ್ನು ಸಾಕಷ್ಟು ವಿಸ್ತಾರವಾಗಿ ಬರೆದಿದ್ದಾರೆ. ವಿ.ಸೀ. ಅವರೂ ಇವರ ಸಂಗೀತಕ್ಕೆ ಮಾರುಹೋಗಿದ್ದರು. ಹೆಚ್. ಎಲ್. ನಾಗೇಗೌಡರಂತೂ ಕೆಂಪೇಗೌಡರ ಜೀವನವನ್ನು ವಸ್ತುವಾಗಿ ಹೊಂದಿರುವ ಒಂದು ಕಾದಂಬರಿಯನ್ನೇ ರಚಿಸಿದ್ದಾರೆ. (*ಭೂಮಿಗೆ ಬಂದ ಗಂಧರ್ವ*). ಈಚೆಗೆ, ೨೦೦೨ರಲ್ಲಿ ಪ್ರಕಟವಾದ ತಮ್ಮ ವಿದ್ವತ್ಪೂರ್ಣ ಗ್ರಂಥ, **ಕರ್ನಾಟಕ ಸಂಗೀತದ ಮಕುಟಮಣಿಗಳು**, ಇದರಲ್ಲಿ ಡಾ.ಕೆ.ವಿ. ಶ್ರೀಕಂಠಯ್ಯನವರು ಕೆಂಪೇಗೌಡರು ಮತ್ತು ಸ್ವಾಮಿ ವಿವೇಕಾನಂದರ ಸಂದರ್ಶನವನ್ನು ಕುರಿತು ಪ್ರಸ್ತಾಪಿಸಿದ್ದಾರೆ. ಉಳಿದ ಯಾವ ಲೇಖನದಲ್ಲಿಯೂ ಈ ವಿಷಯದ ಉಲ್ಲೇಖ ಇಲ್ಲ. ನಾನು ನಾಗೇಗೌಡರ ಕಾದಂಬರಿ ಓದಿಲ್ಲ—ಅದನ್ನು ದೊರಕಿಸಿಕೊಳ್ಳುವ ಪ್ರಯತ್ನದಲ್ಲಿದ್ದೇನೆ. [ನಾಗೇಗೌಡರ ಕಾದಂಬರಿಯಲ್ಲಿ ಇವರೀರ್ವರ ಸಂಬಂಧದ ಬಗ್ಗೆ ಸಾಕಷ್ಟು ವಿಸ್ತಾರವಾಗಿಯೇ ಪ್ರಸ್ತಾಪಿಸಲಾಗಿದೆ.—*ಸಂ.*] ಡಾ. ಶ್ರೀಕಂಠಯ್ಯನವರು ಹೊಸದಾಗಿ ಬೆಳಕು ಚೆಲ್ಲಿರುವ ಈ ವಿಷಯವನ್ನು ಕುರಿತು ಬರೆಯಬೇಕೆನ್ನಿಸಿತು. ಸ್ವಾಮೀಜಿಯವರ ಅಭಿಮಾನಿಗಳು ಈ ಅಮೂಲ್ಯವಾದ ದಾಖಲೆಯನ್ನು ಕುರಿತು ಓದಲು ಕುತೂಹಲ ಹೊಂದಿರುವರೆಂಬುದರಲ್ಲಿ ಸಂಶಯವಿಲ್ಲ. ಈ ಘಟನೆಗಳನ್ನು ಉಲ್ಲೇಖಿಸಿ ಡಾ. ಶ್ರೀಕಂಠಯ್ಯನವರು ಉಪಕರಿಸಿದ್ದಾರೆ. ಇವರ ಗ್ರಂಥದಲ್ಲಿ ಕರ್ನಾಟಕ ಸಂಗೀತದ ಇತರ ದಿಗ್ಗಜಗಳ ಉತ್ತಮವಾದ ಪರಿಚಯವೂ ಇದೆ. ಅದು ಈಗ ಅಪ್ರಸ್ತುತ.

ಕೆಂಪೇಗೌಡರು ತಮ್ಮ ಎಂಭತ್ತು ವರ್ಷಗಳ (೧೮೫೭-೧೯೩೭) ಜೀವನವನ್ನು ರೋಮಾಂಚನಕಾರಿಯಾಗಿ ಬಾಳಿದರು. ಚನ್ನಪಟ್ಟಣದ ಹತ್ತಿರದಲ್ಲಿರುವ ನಾಗವಾರ ಇವರ ಊರು. ಶ್ರೀಮಂತ ಕುಟುಂಬ. ಮದುವೆಯಾದ ತರುಣದಲ್ಲಿಯೇ ಹೆಂಡತಿಯೂ ಒಬ್ಬನೇ ಮಗನೂ ಮೃತ್ಯುವಶರಾದರು. ತೀವ್ರ ವೈರಾಗ್ಯ ಹೊಂದಿ ಕೆಂಪೇಗೌಡರು ಊರೂರು ಅಲೆದರು. ಕೊನೆಗೆ ತಮ್ಮ ಪಾಲಿಗೆ ಬಂದ ಆಸ್ತಿಯ ಬಲದಿಂದ ಸಹಸ್ರಾರು ರೂಪಾಯಿ ಗುರುದಕ್ಷಿಣೆ ಕೊಟ್ಟು ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಅವರ ಶಿಷ್ಯರಾಗಿ ಸಂಗೀತ ಕಲಿತರು.

## ಪಟ್ಣಂ ಸುಬ್ರಹ್ಮಣ್ಯ ಅಯ್ಯರ್

ತ್ಯಾಗರಾಜರ ಶಿಷ್ಯಪರಂಪರೆಯಲ್ಲಿ ಬಂದ ಅತಿ ಶ್ರೇಷ್ಠ ವಾಗ್ಗೇಯಕಾರರಲ್ಲಿ ಒಬ್ಬರು ಇವರು. ಶ್ರೀತ್ಯಾಗರಾಜರ ಶಿಷ್ಯರಾಗಿದ್ದ ಮಾನಂಬು ಚಾವಡಿ ವೆಂಕಟಸುಬ್ಬಯ್ಯರ್ ಅವರ ಶಿಷ್ಯರು. ತ್ಯಾಗರಾಜರ ಕೃತಿಗಳನ್ನೇ ಹೋಲುವ ಸುಮಾರು ನೂರು ಕೃತಿಗಳನ್ನು ರಚಿಸಿರುವ ಸುಬ್ರಹ್ಮಣ್ಯ ಅಯ್ಯರ್ ೧೯೦೨ರವರೆಗೆ ಜೀವಿಸಿದ್ದರು. ಇವರ ಪ್ರಮುಖ ಶಿಷ್ಯರು ರಾಮನಾಡ್ ಶ್ರೀನಿವಾಸ ಅಯ್ಯಂಗಾರ್, ಟೈಗರ್ ವರದಾಚಾರ್ಯರು, ಭೈರವಿ ಕೆಂಪೇಗೌಡರು ಮತ್ತು ಮೈಸೂರು ವಾಸುದೇವಾಚಾರ್ಯರು. ಇವರ ಪೈಕಿ ಮೊದಲನೆಯವರು ಮತ್ತು ಕೊನೆಯವರು ಮಾತ್ರ ವಾಗ್ಗೇಯಕಾರರಾಗಿ ಪ್ರಸಿದ್ಧರಾಗಿದ್ದಾರೆ. ವರದಾಚಾರ್ಯರೂ ಕೃತಿ ರಚನೆ ಮಾಡಿದ್ದಾರೆ. ಈ ನಾಲ್ಕು ಜನ ಶಿಷ್ಯರೂ ಗಾಯನದಲ್ಲಿ

ಒಬ್ಬರನ್ನೊಬ್ಬರು ಮೀರಿಸಿದವರೇ, ಗುರುಗಳಿಗೆ ಒಳ್ಳೆಯ ಹೆಸರು ತಂದುಕೊಟ್ಟವರು.

## ಕೆಂಪೇಗೌಡರ ಪ್ರತಿಭೆ ಬೆಳಗಿದ ದಿನ

ಅಂದು ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಅವರ ಮನೆಯ ಮಹಡಿಯ ಮೇಲೆ ಅವರದೇ ಸಂಗೀತ ಏರ್ಪಾಡಾಗಿತ್ತು. ತಿರುವಾಯೂರಿಗೆ ಬಂದಿದ್ದ ತಿರುವಾಂಕೂರಿನ ತಿರುಕ್ಕೋಡಿಕಾವಲ್ ಕೃಷ್ಣ ಅಯ್ಯರ್ ಎಂಬ ಹೆಸರಾದ ಪಿಟೀಲು ವಿದ್ವಾಂಸರು ಊರಿಗೆ ಬಂದಿದ್ದರು. ಅವರಿಗೆ ಸನ್ಮಾನ ಮಾಡಲೆಂದೇ ಅಂದಿನ ಕಛೇರಿ. ಊರಿನ ರಸಿಕರೆಲ್ಲ ಸೇರಿದ್ದರು. ಅಯ್ಯರ್ ಅವರು ಭೈರವಿ ರಾಗದಲ್ಲಿ ದೀಕ್ಷಿತರ ಕೀರ್ತನೆಯೊಂದನ್ನು ಹಾಡುತ್ತಿದ್ದರು. ಆಲಾಪನೆ, ಪಲ್ಲವಿ, ಅನುಪಲ್ಲವಿಯಲ್ಲಿಯೇ ಒಂದೂವರೆ ಗಂಟೆ ಕಳೆಯಿತು. ಯಾರಿಗೂ ಸಮಯದ ಪರಿವೆಯೇ ಇರಲಿಲ್ಲ. ರಾತ್ರಿ ಹೊತ್ತಾಯಿತು. ಮನೆಯ ಯಜಮಾನಿಗೆ ಇವರ ಊಟ ಒಂದು ಮುಗಿದರೆ ಚೆನ್ನ ಎಂದೆನಿಸಿತು. ಅವರು ಬಾಗಿಲಲ್ಲಿಯೇ ಕುಳಿತು ಸಂಗೀತ ಕೇಳುತ್ತಿದ್ದ ಕೆಂಪೇಗೌಡರನ್ನು ಕರೆದು, "ಕೆಂಪು, ಊಟ ಮಾಡಿ ನಂತರ ಸಂಗೀತ ಮುಂದುವರಿಸಬಹುದು ಎಂದು ಗುರುಗಳಿಗೆ ಗುಟ್ಟಾಗಿ ಹೇಳಪ್ಪ" ಎಂದರು. ಅಲ್ಲಿದ್ದವರಲ್ಲೆಲ್ಲಾ ಗುರುಗಳಲ್ಲಿ ಸಲೀಸಾಗಿ ಮಾತನಾಡಬಲ್ಲವ ಕೆಂಪಣ್ಣ ಒಬ್ಬನೇ.

ಗುರುಗಳ ಹಾಡಿನ ನಂತರ ಕೃಷ್ಣಯ್ಯರ್ ವಯಲಿನ್ ನುಡಿಸುತ್ತಿದ್ದ ಸಮಯವನ್ನು ನೋಡಿಕೊಂಡು ಕೆಂಪಣ್ಣ ಗುರುಗಳ ಕಿವಿಯಲ್ಲಿ, "ಗುರುಗಳೆ, ಅಮ್ಮ ಹೇಳಿದರು, ಊಟ ಸಿದ್ಧವಾಗಿದೆಯಂತೆ. ದಯಮಾಡಿಸಿ ಎಂದು ಹೇಳಿದ್ದಾರೆ.... ಅಪ್ಪಣೆ ಆದರೆ ತಾವು ಊಟ ಮಾಡಿ ಬರುವವರೆಗೆ ನಾನು ಜನಗಳನ್ನು ರಂಜಿಸಲು ಹಾಡುತ್ತ ಇರುತ್ತೇನೆ..." ಎಂದು ವಿನಯದಿಂದ ಹೇಳಿದ. ಆಗ ಗುರುಗಳಿಗೆ ಮಹಾಕೋಪ ಬಂದಿತು. ಅವರು ಕೆಂಪಣ್ಣನನ್ನು ಎಳೆದು ವೇದಿಕೆಯ ಮೇಲೆ ಕುಕ್ಕರಬಡಿದು, "ಎಲ್ಲಿ ಹಾಡು, ನೋಡೋಣ" ಎಂದು ಗರ್ಜಿಸಿದರು. ಕೆಂಪಣ್ಣ ಗಡಗಡ ನಡುಗಿದ. ಕೃಷ್ಣಯ್ಯರ್ ಕಮಾನು ಕೆಳಗೆ ಇಟ್ಟು ಪ್ರಶ್ನಾರ್ಥಕವಾಗಿ ನೋಡಿದರು. ಗುರುಗಳು ಮತ್ತೆ "ಹಾಡ್ತೀಯೋ ಇಲ್ಲವೋ" ಎಂದು ಗದರಿಸಿದರು. ಹೆದರಿದ್ದರೂ ಕೆಂಪಣ್ಣ ಗುರುಗಳು ನಿಲ್ಲಿಸಿದ್ದ ಅನುಪಲ್ಲವಿಯನ್ನು ಬಿಟ್ಟು ಕೀರ್ತನೆಯ ಚರಣವನ್ನು ಎತ್ತಿಕೊಂಡನು. ಅವನೂ ಹನ್ನೆರಡು ವರ್ಷ ಗುರುಗಳ ಹತ್ತಿರ ಸಾಧನೆ ಮಾಡಿದ್ದನಷ್ಟೆ, ಸುಂದರವಾದ ಶಾರೀರವನ್ನೂ ಗಳಿಸಿಕೊಂಡಿದ್ದ. ಭೈರವಿ ರಾಗ ಅಲೆ ಅಲೆಯಾಗಿ ಹೊರಹೊಮ್ಮಿತು. ಗುರುಗಳಿಗೆ ದಂಗು ಬಡಿದಂತೆ ಆಯಿತು. ಕೃಷ್ಣಯ್ಯರೂ, ಸೇರಿದ್ದ ಸಭಿಕರೂ ಅವಾಕ್ಕಾಗಿ ಆ ಗಾಂಧರ್ವ ಸಂಗೀತವನ್ನು ಕೇಳಿದರು. ಕೆಂಪಣ್ಣನೂ ಒಂದೂವರೆ ಗಂಟೆ ಭೈರವಿಯನ್ನು ವಿಸ್ತಾರವಾಗಿ ಹಾಡಿದ. ಗುರುಗಳು ಮಹದಾನಂದದೊಡನೆ ತಮ್ಮ ಹೆಗಲ ಮೇಲೆ ಇದ್ದ ತಿರುವಾಂಕೂರು ರಾಜರ ಬಳುವಳಿಯಾದ ಶಾಲನ್ನು ಶಿಷ್ಯನಿಗೆ ಹೊದಿಸಿದರು, "ಕೆಂಪು, ನನ್ನ ಶ್ರಮ ಸಾರ್ಥಕವಾಯಿತಪ್ಪ. ನಿನ್ನಿಂದ ಭೈರವಿ ರಾಗವೇ ಅಮರವಾಗಿದೆ" ಎಂದು ಆಶೀರ್ವಾದ ಮಾಡಿದರು. ಎಲ್ಲರೂ ಹರ್ಷೋದ್ಗಾರ ಮಾಡಿದರು. ಹೀಗೆ ಕೆಂಪೇಗೌಡರ ಪ್ರತಿಭೆ ಅಂದು ಬೆಳಕಿಗೆ ಬಂದಿತು.

## ಗುರುಕುಲದಿಂದ ಉತ್ತೀರ್ಣ

ಹೀಗೆಯೇ ಗುರುಸೇವೆ ಮಾಡುತ್ತ ಸಂಗೀತ ಕಲಿಯುತ್ತಿದ್ದ ಕೆಂಪೇಗೌಡರಿಗೆ ಗುರುಗಳು ಒಂದು ದಿನ ಹೇಳಿದರು: "ಇನ್ನು ನಿನಗೆ ನಾನು ಕಲಿಸಬೇಕಾದದ್ದು ಏನೂ ಉಳಿದಿಲ್ಲ. ಹೋಗಿ ಬಾ. ಕೀರ್ತಿಶಾಲಿಯಾಗು." ಅವನನ್ನು ಹರಸಿದರು. ಆಮೇಲೆ ಅಲ್ಲಲ್ಲಿ ಕಛೇರಿಗಳನ್ನು ನಡೆಸಿ ಕೆಂಪೇಗೌಡರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ಕೊನೆಗೆ ಚಾಮುಂಡಿ ಬೆಟ್ಟದ ಗುಹೆಯೊಂದರಲ್ಲಿ ವಾಸಿಸುತ್ತ ಸಂಗೀತ ಸಾಧನೆಯೊಂದನ್ನೇ ಅವಲಂಬಿಸಿರುತ್ತಿದ್ದರು. ಒಂದು ದಿನ ಬೆಟ್ಟಕ್ಕೆ ಬಂದು ದೇವಿಯ ಪೂಜೆ ಮಾಡುತ್ತಿದ್ದ ಮೈಸೂರು ಮಹಾರಾಜರಿಗೆ ಕೆಂಪೇಗೌಡರು ಹಾಡುತ್ತಿದ್ದುದು ಕೇಳಿಸಿತು. ಇವರು ಯಾರು ಎಂದು ವಿಚಾರಿಸಿ ತಿಳಿದುಕೊಂಡರು. ಈ ಹಿಂದೆಯೇ ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ದೊರೆಗಳಿಗೆ ತಮ್ಮ ಶಿಷ್ಯ ಕೆಂಪೇಗೌಡನ ವಿಷಯವನ್ನು ಬರೆದು ತಿಳಿಸಿದ್ದರು. ಕೆಂಪೇಗೌಡರು ಅಲ್ಲಲ್ಲಿ ಹಾಡುತ್ತಿದ್ದ ವಿಷಯವೂ ಅವರಿಗೆ ತಿಳಿದಿತ್ತು. ಕೆಂಪೇಗೌಡರನ್ನು ಅರಮನೆಗೆ ಕರೆಯಿಸಿ ಒಂದು ಕಛೇರಿಯನ್ನು ಏರ್ಪಡಿಸಿದರು.

## ಸ್ವಾಮಿ ವಿವೇಕಾನಂದರ ಮೆಚ್ಚುಗೆ

ಆಗ ೧೮೯೨ರ ಕಾಲ. ಸ್ವಾಮಿ ವಿವೇಕಾನಂದರೂ ಮೈಸೂರಿನಲ್ಲಿದ್ದರು. ಅವರೂ ಅರಮನೆಯಲ್ಲಿ ಕೆಂಪೇಗೌಡರ ಸಂಗೀತವನ್ನು ಕೇಳಿ ಆನಂದಪರವಶರಾದರು. ಸ್ವಾಮೀಜಿ ಮಹಾರಾಜರಿಗೆ ಹೇಳಿದರು: "ಈ ಅನರ್ಘ್ಯರತ್ನ ನಿಮ್ಮ ಅರಮನೆಯಲ್ಲಿಯೇ ಇರಬೇಕಾದದ್ದು. ಈತನ ಸಂಗೀತ ಅಪರೂಪದ ವೈರಾಗ್ಯದಿಂದ ಪ್ರೇರಿತವಾದ ಪಾರಮಾರ್ಥಿಕ ದೈವೀ ಸಂಗೀತ."

೨೩ನೇ ಜೂನ್ ೧೮೯೪ರಂದು ಸ್ವಾಮೀಜಿ ಮೈಸೂರು ಮಹಾರಾಜರಿಗೆ ಚಿಕಾಗೋದಿಂದ ಬರೆದ ಪತ್ರ ಚರಿತ್ರಾರ್ಹವಾಯಿತು. ತಮ್ಮ ಸುದೀರ್ಘ ಪತ್ರವನ್ನು ಮುಗಿಸುತ್ತಾ ಸ್ವಾಮೀಜಿ ಬರೆದರು : "ಎಲೈ ಮಹಾನುಭಾವನಾದ ದೊರೆಯೆ, ಕೆಲವು ದಿನದ ಬಾಳುವೆಯದು ಈ ಜನ್ಮ. ಜಗತ್ತಿನ ಸುಖಭೋಗಗಳೆಲ್ಲ ಕ್ಷಣಿಕ. ಯಾರು ಪರರ ಹಿತಕ್ಕಾಗಿ ಬದುಕುವರೋ ಅವರೇ ಜೀವಂತರು. ಉಳಿದವರೆಲ್ಲ ಜೀವಚ್ಛವಗಳೇ ಸರಿ..." ಸ್ವಾಮೀಜಿಯವರೊಡನೆ ಆತ್ಮೀಯತೆಯನ್ನು ಬೆಳೆಸಿಕೊಂಡಿದ್ದ ಮೈಸೂರು ಮಹಾರಾಜರಿಗೆ ಅವರ ನುಡಿಗಳ ಮಹತ್ವ ತಿಳಿದುಕೊಳ್ಳುವುದರಲ್ಲಿ ಯಾವುದೇ ಕಷ್ಟವಿರಲಿಲ್ಲ. ಆದರೆ ದುರದೃಷ್ಟವೆಂದರೆ, ಆರೇ ತಿಂಗಳಲ್ಲಿ ಕಲ್ಕತ್ತೆಯಲ್ಲಿದ್ದಾಗ ಮೈಸೂರು ಮಹಾರಾಜರು ಅಕಾಲ ಮರಣಕ್ಕೆ ತುತ್ತಾದರು. ಆಗ ಅವರೊಡನೆ ಇದ್ದ ಕೆಂಪೇಗೌಡರಿಗೆ ಇದು ಇನ್ನೊಂದು ಆಘಾತವಾಯಿತು. ಈ ಆಘಾತದಿಂದ ತತ್ತರಿಸಿದ ಕೆಂಪೇಗೌಡರು ಮೈಸೂರಿಗೆ ಹಿಂದಿರುಗಲಿಲ್ಲ. ಅವರು ಕಲ್ಕತ್ತೆಯಿಂದ ಹಿಮಾಲಯಕ್ಕೆ ಹೋಗಿ ಮೂರು ವರ್ಷಗಳು ಅಲ್ಲಿಯೇ ಉಳಿದರು.

### ಮತ್ತೆ ಸ್ವಾಮೀಜಿ ಸಂದರ್ಶನ

೧೮೯೭ರಲ್ಲಿ ಸ್ವಾಮೀಜಿ ಮತ್ತೆ ಸ್ವದೇಶಕ್ಕೆ ಹಿಂದಿರುಗಿರುವ ಸುದ್ದಿ ಕೆಂಪೇಗೌಡರಿಗೆ ತಿಳಿದಾಗ ಅವರು ಕಲ್ಕತ್ತೆಗೆ ಧಾವಿಸಿದರು. ಇವರನ್ನು ಮತ್ತೆ ಕಂಡು ಸ್ವಾಮೀಜಿ ಸಂತೋಷಪಟ್ಟರು. ಅವರ ಕೈಲಿ ಹಾಡಿಸಿ ಕೇಳಿ ಆನಂದಪರವಶರಾದರು. ಅವರು ಹೇಳಿದರು : "ಮಗು, ಹಿಂದೆ ಮೈಸೂರು ಅರಮನೆಯಲ್ಲಿ ನಿನ್ನ ಅಪೂರ್ವ ಸಂಗೀತ ಕೇಳಿದೆ. ಈಗ ಮತ್ತೆ ಕೇಳುವ ಸೌಭಾಗ್ಯ ನನ್ನದಾಯಿತು. ಆದರೆ ನಿನಗೆ ಬಹುಮಾನಿಸಲು ನನ್ನ ಹತ್ತಿರ ಏನೂ ಇಲ್ಲ. ಈ ಕಾವಿ ಬಟ್ಟೆಯನ್ನೇ ನಿನಗೆ ಕೊಡುತ್ತೇನೆ." ಹೀಗೆ ಹೇಳಿ ಒಂದು ಕಾವಿ ಬಟ್ಟೆಯನ್ನು ಅವರಿಗೆ ಕೊಟ್ಟರು. ಕೆಂಪೇಗೌಡರು ದೀರ್ಘ ದಂಡಪ್ರಣಾಮ ಮಾಡಿ ತಮಗೆ ಸಂನ್ಯಾಸ ದೀಕ್ಷೆ ಕೊಡಬೇಕೆಂದು ಬೇಡಿದರು.

ಸ್ವಾಮೀಜಿ ಹೇಳಿದರು : "ಅಪ್ಪಾ, ನಿನಗೆ ಈ ಕಾವಿ ಬಟ್ಟೆಯೇ ಶ್ರೀರಕ್ಷೆಯಾಗಿ ಇರಲಿ. ನಿನಗೆ ಸಂನ್ಯಾಸದ ಆವಶ್ಯಕತೆ ಇಲ್ಲ. ದೇವರ ಸನ್ನಿಧಿಗೆ ನೇರವಾಗಿ ಕರೆದೊಯ್ಯುವ ಸಾಧನೆಯಾದ ಸಂಗೀತ ನಿನ್ನ ಹತ್ತಿರ ಇದೆ. ಅದು ಕರಗತವಾಗಿರುವ ನಿನಗೆ ಸಂನ್ಯಾಸ ಏಕೆ? ನೀನು ಸದ್ದು ಗದ್ದಲಗಳಿಗೆ ಅಂಜದ ಕೇಸರಿಯಂತೆ ಇರು. ನೀರಿನಲ್ಲಿದ್ದರೂ ನಿರ್ಲಿಪ್ತವಾದ ಕಮಲದಂತೆ ಜಗತ್ತಿನಲ್ಲಿರು. ಖಡ್ಗಮೃಗದಂತೆ ಏಕಾಕಿಯಾಗಿ ಸಂಚರಿಸುತ್ತ ಜನರಿಗೆ ನಿನ್ನ ಸಂಗೀತ ಸುಧೆಯನ್ನು ಪಾನಮಾಡಿಸಿ ಧನ್ಯರನ್ನಾಗಿಸು."

ಕೆಂಪೇಗೌಡರ ನಿಕಟವರ್ತಿಗಳಾದ ಸ್ವಾತಂತ್ರ್ಯಹೋರಾಟಗಾರರಾಗಿದ್ದ ಎಚ್.ಕೆ. ವೀರಣ್ಣಗೌಡರು ಹೇಳುತ್ತಾರೆ, "ಸ್ವಾಮಿ ವಿವೇಕಾನಂದರು ತಮ್ಮನ್ನು ಆಶೀರ್ವದಿಸಿ ಕೊಟ್ಟ ನಿಲುವಂಗಿ ಒಂದನ್ನೇ ಕೆಂಪೇಗೌಡರು ಪ್ರಾಣಪದಕದಂತೆ ತಮ್ಮ ಬಳಿ ಇರಿಸಿಕೊಂಡಿದ್ದನ್ನು ನಾನು ನೋಡಿದ್ದೇನೆ...."

### ಕೆಂಪೇಗೌಡರ ಏಕಾಕೀ ಜೀವನ

ಮುಂದೆ ಸುಮಾರು ನಲವತ್ತು ವರ್ಷ ಕೆಂಪೇಗೌಡರು ಯಾವ ಬಂಧನವೂ ಇಲ್ಲದೆ ಏಕಾಕಿಯಾಗಿ ಸಂಚರಿಸುತ್ತ ಎಲ್ಲೆಂದರೆ ಅಲ್ಲಿ ಹಾಡುತ್ತ ಜೀವಿಸಿದರು. ಕೆಂಪೇಗೌಡರು ಸಭೆಗಳಲ್ಲಿ ಮಾತ್ರ ಹಾಡಿದವರಲ್ಲ. ಒಂದು ದಿನ ಬೆಂಗಳೂರಿನ ರಸ್ತೆಯೊಂದರಲ್ಲಿ ಮೊಸರು ಮಾರುವ ಹೆಂಗಸು "ಮೊಸರು ಬೇಕೇ ಮೊಸರು" ಎಂದು ಕೂಗುತ್ತಿದ್ದುದನ್ನು ಕೇಳಿ ಸ್ಫೂರ್ತಿಗೊಂಡು "ಮೊಸರು ಬೇಕೇ ಮೊಸರು" ಎಂದು ಹಾಡತೊಡಗಿದರು. ಇನ್ನೊಂದು ದಿನ "ತರೀಕೆರೆ ಕೆರೆ ಏರಿ ಮೇಲೆ ಮೂರು ಕರಿ ಕುರಿ ಮೇಯುತ್ತಿತ್ತು" ಎಂದೇ ಪಲ್ಲವಿಯನ್ನು ಹಾಡಿದರಂತೆ. ಇನ್ನೊಂದು ದಿನ ತಮ್ಮ ಮಿತ್ರರೊಬ್ಬರ ಅಂಗಡಿಗೆ ಕೆಂಪೇಗೌಡರು ಹೋದರು. ಅಂಗಡಿಯ ಶೆಟ್ಟರು "ಮೊನ್ನೆ ನಿಮ್ಮ ಕಛೇರಿ ಬಹು ಸೊಗಸಾಗಿದ್ದಿತಂತೆ. ಏನು ಮಾಡಲಿ, ಅಂಗಡಿಯಲ್ಲಿದ್ದ ನನಗೆ ಆ ಸಂಗೀತ ಕೇಳುವ ಲಭ್ಯ ಇರಲಿಲ್ಲ" ಎಂದರು. ಆಗ ಗೌಡರು, "ನೀವು ಕಛೇರಿಗೆ ಬರದಿದ್ದರೆ ಚಿಂತೆ ಇಲ್ಲ. ನಾನೇ ಇಲ್ಲಿದ್ದೀನಲ್ಲ, ಕೇಳಿ," ಎಂದು ಹೇಳಿ ಅಕ್ಕಿ ಮೂಟೆಯ ಮೇಲೆ ಕುಳಿತು ಹಾಡಿ ಆ ವರ್ತಕರನ್ನು ಸಂತೋಷಪಡಿಸಿದರು. ಆಗ ಅವರ ಹಾಡು ಕೇಳುತ್ತಿದ್ದವರಿಂದ ರಸ್ತೆಯೆಲ್ಲ ತುಂಬಿ ಹೋಯಿತು!

### ತ್ಯಾಗರಾಜ ಆರಾಧನೆಯಲ್ಲಿ

ಪ್ರತಿ ವರ್ಷ ತ್ಯಾಗರಾಜರ ಪುಣ್ಯತಿಥಿಯನ್ನು ಅವರ ಸಮಾಧಿ ಇರುವ ಕಾವೇರಿ ತೀರದ ತಿರುವಾಯೂರು (ತಿರುವಯ್ಯಾರ್ ಎಂದೂ ಹೇಳುತ್ತಾರೆ) ಎಂಬ ಊರಿನಲ್ಲಿ ಸಂಗೀತದ ಅಭಿಮಾನಿಗಳಾದ ಸಹಸ್ರಾರು ಜನರಿಂದ ಆಚರಿಸಲಾಗುತ್ತದೆ. ಒಂದು ವಾರದ ಕಾರ್ಯಕ್ರಮದಲ್ಲಿ ಹಿರಿಯ, ಕಿರಿಯ ಕಲಾವಿದರೆಲ್ಲ ತ್ಯಾಗರಾಜರಿಗೆ ತಮ್ಮ ಗಾನದ ಮೂಲಕ ಶ್ರದ್ಧೆ ಅರ್ಪಿಸುತ್ತಾರೆ.

ಒಂದು ದಿನ ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಅವರ ಸಂಗೀತ ಏರ್ಪಾಡಾಗಿತ್ತು. ಅವರು ತಮ್ಮ ನೆರವಿಗೆ ಕೆಂಪೇಗೌಡರನ್ನು ಹಾಡಲು ಕೂರಿಸಿಕೊಂಡರು. ಆಗ ಗೌಡರ ಸಂಗೀತ ಕೇಳಿದವರು ಮಾರನೆಯದಿನ ಅವರದೇ ಸಂಗೀತವನ್ನು ಏರ್ಪಡಿಸಿದರು. ಅವರ ಜೊತೆ ಪಿಟೀಲು ನುಡಿಸಲು ಖ್ಯಾತ ವಿದ್ವಾಂಸರಾದ ತಿರುಕ್ಕೋಡಿ ಕಾವಲ್ ಕೃಷ್ಣ ಅಯ್ಯರ್ ಮತ್ತು ಮೃದಂಗ ನುಡಿಸಲು ಅಷ್ಟೇ ಪ್ರಸಿದ್ಧರಾದ ನಾರಾಯಣಸ್ವಾಮಿ ಅಪ್ಪಾ. ಗುರುಗಳ ಎದುರಿಗೆ ಹಾಡಲು ಹಿಂಜರಿಯುತ್ತಿದ್ದ ಕೆಂಪೇಗೌಡರನ್ನು ಗುರುಗಳೇ ಹುರಿದುಂಬಿಸಿ ಹಾಡುವಂತೆ ಹೇಳಿದರು.

ಅಂದಿನ ಕಛೇರಿಯಲ್ಲಿ ಭೈರವಿ ಪ್ರಧಾನ ರಾಗವಾಗಿತ್ತು. ರಾಗಾಲಾಪನೆ ವಿಶಿಷ್ಟವಾಗಿದ್ದು ಸಭೆಯಲ್ಲಿ ವಿದ್ಯುತ್ ಸಂಚಾರವಾದಂತೆ ಆಯಿತು. ಗಾಯಕರೇ ಕಂಪಿಸಿದರು. ಅವರ ಕಂಠ ಗದ್ಗದವಾಯಿತು. ಕಣ್ಣಿನಲ್ಲಿ ನೀರು. ಎದುರಿಗೆ ಕುಳಿತಿದ್ದ ಗುರುಗಳ ಕಣ್ಣಿನಲ್ಲೂ ಆನಂದಾಶ್ರು. ಗೌಡರು ಹಾಡಲಾರದೆ ನಮ್ರರಾಗಿ ಕೃಷ್ಣಯ್ಯರ್ ಕಡೆ ನೋಡಿದರು. ಗುರುಗಳು "ನುಡಿಸಿ, ಕೃಷ್ಣಯ್ಯರ್," ಎಂದರು. ಕೃಷ್ಣಯ್ಯರ್, "ಈ ದಿನ ರಾಗಾಭಿಮಾನಿ ದೇವತೆಯನ್ನೇ ಒಲಿಸಿಕೊಂಡು ಆಕೆಯ ಪೂರ್ಣಾನುಗ್ರಹದಿಂದ ಹರಿದು ಬಂದ ಗೌಡರ ಈ ಗಾನವಾಹಿನಿಯಲ್ಲಿ ನಮ್ಮ ದೇಹಗಳೇ ತೇಲಿಹೋದ ಹಾಗೆ ಆಗಿ ಮುಂದೆ ನುಡಿಸಲು ಜೀವ ಅಳುಕುತ್ತಿದೆ" ಎಂದು ಹೇಳಿ ಸಂಗೀತ ಮುಂದುವರಿಸಿದರು.

ಕೊನೆಯಲ್ಲಿ ಗುರುಗಳೇ ವೇದಿಕೆಯ ಮೇಲೆ ಬಂದು "ಗೌಡರನ್ನು ನನ್ನ ಶಿಷ್ಯ ಎಂದು ಹೇಳಿಕೊಳ್ಳಲು ಅಪಾರ ಆನಂದ ಆಗುತ್ತಿದೆ. ಸಂಗೀತವೇ ನನ್ನ ಜೀವದ ಉಸಿರು. ಆದರೆ ರಸಾನುಭವ ನನಗೆ ಹಿಂದೆ ಎಂದೂ ಆಗಲಿಲ್ಲ. ಭೈರವಿ ರಾಗ ಕೆಂಪೇಗೌಡರಿಗಾಗಿಯೇ ಜನಿಸಿತೇನೋ ಎನಿಸುತ್ತಿದೆ. ಅವರಿಗೆ ಭೈರವಿ ಕೆಂಪೇಗೌಡ ಎಂಬ ಹೆಸರು ಅನ್ವರ್ಥನಾಮ" ಎಂದು ಹೇಳಿ ವ್ಯವಸ್ಥಾಪಕರು ತಂದ ಶಾಲನ್ನು ತಾವೇ ಶಿಷ್ಯನಿಗೆ ಹೊದಿಸಿ ಸನ್ಮಾನಿಸಿದರು.

◆